ಇಂದು ದಿನಾಂಕಃ 24.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಎಸ್ ಆರ್ ಎ ವಕೀಲರಿಂದಃ

ಮೂಲ ವಾದಿ ರುದ್ರವ್ವ ರವರಿಗೆ 3 ಜನ ಮಕ್ಕಳು ಇದ್ದರು. ಅವರೆಂದರೆ ವಾದಿ 1(ಎ) ಹಾಗೂ ಪ್ರತಿವಾದಿ 6 ಮತ್ತು 7 ರವರು ಎಂದರೆ ಸರಿ. ದಾವಾ ಆಸ್ತಿಗಳು ರುದ್ರವ್ವ ರವರಿಗೆ ತನ್ನ ತವರು ಮನೆಯಿಂದ ಬಂದಂತಹ ಆಸ್ತಿಗಳು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರುದ್ರವ್ವ ನ ಗಂಡನ ಹೆಸರು ಚಿಕ್ಕಪ್ಪ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳ ಬಗ್ಗೆ ನಾನು ಮಾಹಿತಿ ನೀಡಿರುವುದಿಲ್ಲ. ನಾನು 1973 ರಲ್ಲಿ ಹೊಲವನ್ನು ಖರೀದಿ ಮಾಡಿದ್ದು ಈವರೆಗೂ ನಾನೇ ಹೊಲವನ್ನು ವಹಿವಾಟು ಮಾಡಿಕೊಂಡು ಬರುತ್ತಿದ್ದೇನೆ. ಈವರೆಗೂ ಆ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ವಾದಿ ಈ ದಾವೆ ಹೂಡಿರುವ ಕಾರಣದಿಂದ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ.

2. ನಾನು ಜಮೀನನ್ನು ಖರೀದಿ ಮಾಡುವಾಗ ವಾದಿ ಗುಡ್ಡಪ್ಪ ಹಾಗೂ ಪ್ರತಿವಾದಿ 6 ಮತ್ತು 7 ರವರು ಅಲ್ಪವಹಿಗಳಾಗಿದ್ದ ಕಾರಣದಿಂದ ಅವರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಖರೀದಿ ಪತ್ರಕ್ಕೆ ಮೂಲ ವಾದಿ ರುದ್ರವ್ವ ರವರ ಸಹಿ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ಮೂಲ ವಾದಿ ರುದ್ರವ್ವ ರವರ ಗಂಡನಿಂದ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಚಿಕ್ಕಪ್ಪನಿಗೆ ಅವರಿಗೆ ಹೆಂಡತಿ ಮತ್ತು ಮಕ್ಕಳು ಇರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ.

3. ಚಿಕ್ಕಪ್ಪ ಎಂಬುವವರಿಗೆ ಬಹಳ ದುಶ್ಚಟಗಳು ಇದ್ದವು ಎಂದರೆ ಸರಿಯಲ್ಲ. ಅವರು ತನ್ನ ಹೆಂಡತಿ ಮಕ್ಕಳಿಗೆ ಬಹಳ ಕಿರುಕುಳ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಅವರಿಗೆ ಕೆಟ್ಟ ಚಟಗಳು ಇದ್ದರೂ ಕೂಡ ನಾನು ದುರುದ್ದೇಶದಿಂದ ಇಲ್ಲಾ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರವ್ವ ಹಾಗೂ ಆಕೆಯ ಮಗ ಅನಕ್ಷರಸ್ಥರು ಎಂದರೆ ಸರಿ. ರುದ್ರವ್ವ ರವರಿಗೆ ಪಾರ್ಶವಾಯು ರೋಗ ಆಗಿದ್ದು ಆಕೆಯಿಂದ ಓಡಾಡಲು ಹಾಗೂ ಮಾತನಾಡಲು ಆಗುತ್ತಿರಲ್ಲಿ, ಆಕೆಯನ್ನು ಅವರ ಮಗ ಗುಡ್ಡಪ್ಪ ರವರು ನೋಡಿಕೊಳ್ಳುತ್ತಿದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಪ್ಪರವರಿಗೆ ಆಸ್ತಿ ಹೇಗೆ ಬಂತು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

4. ದಾವಾ ಆಸ್ತಿಯನ್ನು ಖರೀದಿ ಮಾಡಿದ ದಿನಾಂಕ ಮತ್ತು ತಿಂಗಳು ನನಗೆ ಹೇಳಲು ಆಗುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.